ಜೋರಾಗಿ 'ಯಾರೇ ಕೂಗಾಡಲಿ..' ಅಂತ ಹಾಡೇಬಿಟ್ಟ. ಆ ಎಮ್ಮಿ ಹಂಗೇ ಮೇಯ್ತಾ ಮೇಯ್ತಾ ಮಲ್ಲಯ್ಯನ ಕೆರಿ ಸನ್ಯಾಕ ಬಂತು. ಹಾಡಿನ ಗುಂಗಿನೊಳಗ ಅಂವಾ ಕೆಳಗ ಇಳಿಯೂದೇ ಮರತ. ಎಮ್ಮಿ ಬಡ ಬಡ ಕೆರಿಯೊಳಗ ಹೊಂಟತು. ಹಂಗೇ ಹೋಯ್ತು.. ಹೋಯ್ತು.. ಬಾಳ ಒಳಗ ಹೋಯ್ತು. ಶಿವಬಸುಗ ಹೆದರಿಕಿ ಸುರು ಆಯ್ತು. ಜೋರಾಗಿ ಲಬೋ ಲಬೋ ಅಂತ ಹೊಯ್ಕೊಳಾಕ ಸುರು ಮಾಡದ. ಅಲ್ಲಿ ಯಾರೂ ಇರಲಿಲ್ಲ. ಮಟ ಮಟ ಮಧ್ಯಾಹ್ನ, ಸಂತಿ ದಿನ ಬ್ಯಾರೆ ಅಲ್ಲಿ ಒಂದೇ ಒಂದು ನರ ಪಿಳ್ಳಿ ಇರಲಿಲ್ಲ.

ಎಮ್ಮಿ ಆ ಚುರುಗುಡು ಬಿಸಲಿಗಿ ಹಾಯಾಗಿ ಕೆರಿಯೊಳಗ ಹೋಗಿ ನಿಂತಬಿಟ್ಟತು. ಇಂವಾ ಹಲೆ ಹಲೆ.. ನಡಿ ಅಂದರೂ ಅದೂ ಜಪ್ಪ ಅನ್ನಲಿಲ್ಲ. ಕಲ್ಲ ಬಂಡಿ ನಿಂತಂಗ ನಿಂತು ಬಿಟ್ತು. ಅದರ ಡುಬ್ಬ ಹಿಡಕೊಂಡು 'ನಡಿ.. ಹಲೆ.. ನಡಿ' ಅಂದ. ಅದು ಕಣ್ಣು ಮುಚ್ಚಿ ಹದವಾಗಿ ಮೆಲಕ ಹಾಕತಿತ್ತು. ಅಲ್ಲಿ ಶರಣವ್ವ ನೋಡದರ ಭಜಿ ತಗೊಂಡು ಹೋದವನು ಇಟ್ಟೊತ್ತಾದರೂ ಬರಲಿಲ್ಲ. ಎಲ್ಲಿ ಹಾಳಾಗಿ ಹೋದನೋ ಏನೋ.. ಅಂತ ಮಂದಿಗಿ ಭಜಿ ಕಟ್ಟಿ ಕೊಡ್ತಾ ಬೈಕೊಂತ ಕುಂತಿದ್ದಳು. ಅಂವಾ ನೋಡದರ ಎಮ್ಮಿಗಿ ದಂಡಿಗಿ ತರಬೇಕಂತ ಬಲಗೈಯಿಂದ ಅದರ ಹೊಟ್ಟಿಗಿ ಜಪ್ ಜಪ್ ಅಂತ ಹೊಡಿಯಾಕ ಸುರು ಮಾಡದ. ಆ ಹೊಡತ ಅದಕ್ಕ ತೊಟ್ಟಿಲದೊಳಗ ಹಾಕಿ ಚಪ್ಪರಸದಂಗ ಆಯ್ತು. ಆ ಬಿಸಲಿಗಿ ಬಾಳ ಸುಖ ಅನಭವಿಸಕೊಂತ, ಅಲ್ಲೇ ತೂಕಡಸ್ಕೊಂತ ನಿಂತಿತ್ತು. ಶಿವಬಸು ಸುತ್ತ ಮುತ್ತ ಯಾರರೇ ಅದಾರೋ ಹ್ಯಾಂಗೋ ಅಂತ ನೋಡದ ಯಾರೂ ಕಾಣಲಿಲ್ಲ. ರಾಜಕುಮಾರನ ಗುಂಗು ಅದಾಗಲೆ ಇಳದಂಗಿತ್ತು. ತಪ್ಪಿ ಜಾರಿ ನೀರಿಗಿ ಬಿದ್ದರ ಹ್ಯಾಂಗ ಅನ್ನೂ ಅಂಜಿಕಿಗಿ, ಎಮ್ಮಿ ಡುಬ್ಬಾ ಗಟ್ಟಿ ಹಿಡಕೊಂಡು ಕುಂತಿದ್ದ.

ತುಸು ಹೊತ್ತ ಆದ ಮ್ಯಾಗ ಅದರ ಕೋಡ ಹಿಡದು 'ಹೋಗ್ ಹೋಗ್, ನಡಿ' ಎಂದು ಅಲ್ಲಾಡಿಸಿದ. ಅದು ಹಿಂಗೂ ಮಿಸಕಾಡಲಿಲ್ಲ. ಬಿಸಲಂತ್ರೂ ಅನಗಾಡಿತ್ತು. ಎಮ್ಮಿ ಮೈ ಚುರ್ ಅನ್ನೂವಂಗಾಗಿತ್ತು. ಇನ್ನೇನು ಅದು ದಂಡಿ ಕಡೆ ಹೊಂಟೇ ಬಿಟ್ಟತು ಅನ್ನೂವಂಗ ಮುಂದಿನ ಕಾಲು ಎತ್ತಿ ಇಟ್ಟತು. ಅಂವಗ ಬಾಳ ಖುಷಿ ಆಯ್ತು. ಆದರ ಅವನ ಲೆಕ್ಕಾಚಾರ ತಪ್ಪಿತ್ತು. ಅದು ಹಗೂರಕ ಅಲ್ಲೇ ನೀರೊಳಗ ಕುಂತಗೊಂಡು ಬಿಟ್ಟತು. ಈಗಂವಾ ಜಾರಿ ಬೀಳೂವಂಗಿದ್ದ. ಜೋರಾಗಿ ಚೀರಿ ಅಳ್ಕೊಂತ ಅದರ ಎರಡೂ ಕೋಡ ಹಿಡಕೊಂಡ. ನೀರ ಎಮ್ಮಿ ಬೆನ್ನ ಮಟ ಬಂದಿತ್ತು. ಸುತ್ತಲೂ ನೀರೇ ನೀರು ಹ್ಯಾಂಗ ಮಾಡೂದು ಅಂತ ಶಿವಬಸುಗ ತಿಳೀದಂಗ ಆಯ್ತು. ಮತ್ತ ಅಳ್ಳಿಕ ಸುರು ಮಾಡದ. ಎಮ್ಮಿ ಹಗೂರಕ ಆ ನೀರೊಳಗ ಮಗ್ಗಲ ಹೊರಳಿಸಿ ಬಿಟ್ಟತು. ಶಿವಬಸು ಜಾರಿ ದುಬಕ್..! ಅಂತ ನೀರಿಗಿ ಬಿದ್ದ. ಮುಳಗಿ ಸತ್ತೇ ಹೋದೆ ಅನ್ನೂವಂಗ ಹೆದರಿ, ಕೂಡೂದು.. ಏಳೂದು ಮಾಡತಿದ್ದ. ಹಂಗ ಮಾಡೂ ಮುಂದ ಅಂವ ಎರಡೂ ಕಾಲೂರಿ ನಿಂತಿದ್ದ. ಆಮ್ಯಾಗ ಅಂವಗ ದ್ಯಾಸ್ ಆಯ್ತು ಅಲ್ಲಿ ನೀರ ಇದ್ದಿದ್ದೇ ಅವನ ಎದೀಮಟ..! ಅಂತ. ನಿಂತಲ್ಲೇ ಹೊಳ್ಳಿ ಎಮ್ಮಿ ಕಡಿ ನೋಡದ. ಅದು ಮೈಯೆಲ್ಲಾ ಮುಳಗಿಸಿ ಮುಖಾ ಅಷ್ಟೇ ಮ್ಯಾಲೆತ್ತಿ ಮಲಕೊಂಡಂಗ ಕುಂತಿತ್ತು. ಅದರ ಎರಡೂ ಮೂಗಿನ ಹೊಳ್ಳೆಗಳಿಂದ ಹಗೂರಕ ಸೊಂಯ್.. ಸೊಂಯ್.. ಅಂತ ಸೀಟಿ ಹೊಡದಂಗ ಅವಾಜು ಬರತಿತ್ತು. ಆ ಅವಾಜ್ ನಡುವ ಸಣ್ಣಗ ಸುಖದ ಗೊರಕೀನೂ ಇತ್ತು. ಶಿವಬಸು ತಾ ಅನುಭವಿಸಿದ ಫಜೀತಿ ಯಾರೂ ನೋಡಲಿಲ್ಲಂತ ಹಗೂರಕ ಕಾಲೆತ್ತಿ ಇಡತಾ ದಂಡಿಗಿ ಬಂದ. ಒಂದೆರಡು ಸಾರಿ ಬಿದ್ದ.. ಎದ್ದ.. ನಡದ. ಓಡದ. ಕಾಲೆಲ್ಲಾ ಕೆಸರ ಆಗಿತ್ತು. ಅಂಗಿ ಚಡ್ಡಿ ಹೊಲಸ ಆಗಿದ್ವು. ಹಂಗೇ ಶರಣವ್ವ ಭಜಿ ಮಾಡೊ ಜಾಗದ ಕಡಿ ನಡದ. ಸಂತಿಯೊಳಗ ಮಂದಿ ದಿಟ್ಟಿಸಿ ಇವನ್ನೇ ನೋಡತಿದ್ದರು. ನಗತಿದ್ದರು.

ಹಗೂರಕ 'ಯವ್ವಾ' ಅಂದ. ಶರಣಮ್ಮ ಇವನ್ನ ನೋಡಿದ್ದೇ ಹೌಹಾರಿದಳು. ಹಸಿ ಮಣ್ಣಿನ ಗೊಂಬಿ ಆದಂಗ ಆಗಿದ್ದ. 'ಏನಾಯ್ತು.. ಹಿಂಗ್ಯಾಕ..? ಎಲ್ಲಿ ಹೋಗಿದ್ದಿ..? ಏನು ಮಾಡದಿ..?' ಅಂತ ಕೇಳದಳು. ಏನು ಹೇಳದರೂ ಬಡತ ಬೀಳ್ತಾವಂತ ಅಂವಗ ಗೊತ್ತಿತ್ತು, ಹಂಗಾಗಿ ಶಿವಬಸು ಪಿಳಿ ಪಿಳಿ ಅಂತ ಕಣ್ಣ ಬಿಟ್ಗೊಂಡು ನಿಂತಿದ್ದ.



ಮಿನಿ ಕಥೆ

# ತಾಯಿಯ ತಳಮಳ

★ ಸರಸ್ವತಿ ಶಂಕರ್

'ಓ! ಹಲಸಿನ ಕಾಯಿ ಕೀಳಿಸ್ತಾ ಇದ್ದೀರಾ ಸುಶೀಲಮ್ಮ?'

'ಹೌದು ಪಂಕಜ. ನಿನ್ನೆ ನಮ್ಮ ತೇಜುದು ಫೋನ್ ಬಂದಿತ್ತು. ಇವತ್ತು ಮಧ್ಯಾಹ್ನ ಇಲ್ಲಿಗೆ ಬರ್ತಾನಂತೆ, ಎರಡೇ ದಿನದ ಮಟ್ಟಿಗೆ. ಅವನಿಗೆ ಹಲಸಿನ ಕಾಯಿ ದೋಸೆ, ಹಣ್ಣಿನ ಕಡುಬು ಎಲ್ಲಾ ತುಂಬ ಇಷ್ಟ. ಹಾಗೆ ಅವನ್ನು ಮಾಡೋಣ ಅಂತ. ಪಾಪ, ಅವನಿರುವ ಊರಲ್ಲಿ ಎಲ್ಲಿ ಸಿಗ್ತದೆ ಹಲಸಿನ ಕಾಯಿ?'

'ಹಾಗೋ, ಅದೇನೀಗ ಇದ್ದಕ್ಕಿದ್ದ ಹಾಗೆ? ಒಬ್ಬನೇ ಬರೋದಾ?'

'ಹೂಂ, ಅವನೀಗಾಗಲೇ ದೆಹಲಿಗೆ ಬಂದಿದ್ದಾನೆ, ಒಂದು ಸಮ್ಮೇಳನಕ್ಕೆ. ಬಿಡುವೇ ಇಲ್ವಂತೆ, ಆದರೂ ಹೇಗೋ ಹೊಂದಿಸ್ಕೊಂಡು ನಮ್ಮನ್ನು ನೋಡೋದಕ್ಕೆಂದೇ ಇಲ್ಲಿಗೆ ಬರ್ತಾನೆ. ಎರಡು ವರ್ಷ ಆಯ್ತು ಪಂಕಜ ಅವನನ್ನು ನೋಡದೆ.'

'ಅಬ್ಬಾ, ಎಷ್ಟೊಂದು ಪ್ರೀತಿ ಸುಶೀಲಮ್ಮ ಮಗನಿಗೆ ನಿಮ್ಮ ಮೇಲೆ! ಅಂಥ ಮಗನನ್ನು ಪಡೆಯಲು ಪುಣ್ಯ ಮಾಡಿದ್ದೀರಿ. ನಮ್ದೂ ಒಂದು ಇದೆ ನೋಡಿ. ಯಾರನ್ನೋ ಕಟ್ಕೊಂಡು ಒದ್ದಾಡ್ತಿದೆ. ಸುದ್ದೀನೇ ಇಲ್ಲ ಇತ್ತೀಚೆಗೆ'  ಪಂಕಜ ಕಣ್ಣೊರೆಸಿಕೊಂಡರು.

ಸುಶೀಲ, ಪತಿ ಸೋಮೇಶನೊಂದಿಗೆ ಮಂಗಳೂರಿನ ಕದ್ರಿ ಎಂಬಲ್ಲಿ ವಾಸವಾಗಿದ್ದಾರೆ. ಅಲ್ಲಿ ಅವರಿಗೆ ವಿಶಾಲವಾದ ಹಿತ್ತಿಲು ಮನೆ ಇದೆ. ಮನೆಯ ಸುತ್ತ ಹಲಸು, ಮಾವು, ತೆಂಗಿನ ಮರಗಳಿದ್ದು, ಎಲ್ಲವೂ ಕಾಲ ಕಾಲಕ್ಕೆ ಫಲ ನೀಡುತ್ತವೆ. ಅವರ ಒಬ್ಬನೇ ಮಗ ತೇಜಸ್ ತನ್ನ ಸಂಸಾರದೊಂದಿಗೆ ಲಂಡನ್ನಿನ್ನಲ್ಲಿ ನೆಲೆಸಿದ್ದಾನೆ.

ಕೀಳಿಸಿಟ್ಟ ಎರಡು ಹಲಸಿನ ಕಾಯಿಗಳಲ್ಲಿ ಒಂದು ಹಣ್ಣಾಗಿತ್ತು.

'ರೀ, ನಾಳೆ ತಿಂಡಿಗೆ ಹಲಸಿನಕಾಯಿ ದೋಸೆ, ಹಣ್ಣಿನ ಕಡುಬು, ಎರಡೂ ಮಾಡ್ತೇನೆ, ಆಯ್ತಾ? ಇಷ್ಟು ಪ್ರೀತಿಯಿಂದ ನಮ್ಮ ಮಗ ಬರುವಾಗ' ಸಂಭ್ರಮ ಪಟ್ಟುಕೊಂಡರು ಸುಶೀಲ.

'ಹೌದು, ಅಷ್ಟೂ ಮಾಡದಿದ್ದರೆ ಹೇಗೆ?' ಸೋಮೇಶ ಉತ್ತರಿಸಿದರು.

ಮನೆ ಕೆಲಸದ ನಂಜಮ್ಮನನ್ನೂ ಸಹಾಯಕ್ಕೆ ಸೇರಿಸಿಕೊಂಡು ಗಂಡ ಹೆಂಡತಿ ಹಲಸಿನ ಕಾಯಿಗಳನ್ನು ತುಂಡು ಮಾಡಿ ಸೊಳೆ ಬಿಡಿಸಿದರು.

ತೇಜಸ್ ಸರಿಯಾದ ಸಮಯಕ್ಕೆ ಬಂದು ತಲುಪಿದ. ಹೆತ್ತವರನ್ನು ಅಪ್ಪಿಕೊಂಡು ಆನಂದಬಾಷ್ಪ ಸುರಿಸಿದ. ಸುಶೀಲರಿಗೆ ಮಗನೊಡನೆ ಎಷ್ಟು ಮಾತಾಡಿದರೂ ಸಾಲದು.

